| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

A3 – 2024

| ವಿಷಯ ಸಂಕೇತ Subject Code | 16 |
|---|---|

# ಐಚ್ಛಿಕ ಕನ್ನಡ / OPTIONAL KANNADA

ಸಮಯ: 3 ಗಂಟೆ 15 ನಿಮಿಷಗಳು
Time : 3 Hours 15 Minutes]

(ಒಟ್ಟು ಪ್ರಶ್ನೆಗಳ ಸಂಖ್ಯೆ : 54)
[Total No. of Questions : 54]

ಗರಿಷ್ಠ ಅಂಕಗಳು: 80
[Max. Marks : 80

ಸೂಚನೆಗಳು :

1. **ವಿಭಾಗ 'ಅ'** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.
2. ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.
3. ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸುವುದು.

## ಅ–ವಿಭಾಗ

I. (ಅ) ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ. **(5 × 1 = 5)**

16

1) ನಾಗಿಯನ್ನು ಕಂಡ ನೀರು ಹೀಗೆಂದಿತು.
   (a) ನೋಡು ನಾಗಿ ನೋಡು
   (b) ನಿಲ್ಲು ನಾಗಿ ನಿಲ್ಲು
   (c) ಓಡು ನಾಗಿ ಓಡು
   (d) ಆಡು ನಾಗಿ ಆಡು

2) ಇವನು ಮಣ್ಣಿನ ಭೋಗಿ
   (a) ವ್ಯಾಪಾರಿ
   (b) ಕುಂಬಾರ
   (c) ರೈತ
   (d) ಚಮ್ಮಾರ

3) ಬಡವರಿಗೆ ಇವರೇ ಗತಿ

(a) ಬಡವರು

(b) ಶ್ರೀಮಂತರು

(c) ಗುಣವಂತರು

(d) ಹೃದಯವಂತರು

4) ಜಗದ ಪಾಪ ನುಂಗುವವನು

(a) ವಿಷ್ಣು

(b) ದೇವೇಂದ್ರ

(c) ಬ್ರಹ್ಮ

(d) ಶಿವ

5) ಎದ್ದೇಳು ಭಿಕ್ಷುಕನೆ, ನನ್ನನ್ನದೊಳೆ ಮುಷ್ಟಿ
ನಿನಗಿಕ್ಕಿ, ಶಿವಪೂಜೆ ಮಾಡುವೆನು. ನೀನೆನ್ನ
ಸೋದರ, ನೀನೆನ್ನ ದೇಗುಲ!
ಇಲ್ಲಿ ದೇವರ ಪೂಜೆ ಎಂದರೆ

(a) ಬಡವನಿಗೆ ಹಣ ನೀಡುವುದು

(b) ಹಸಿದವನಿಗೆ ಅನ್ನವಿಕ್ಕುವುದು

(c) ಭಿಕ್ಷುಕರಿಗೆ ಕರುಣೆ ತೋರುವುದು

(d) ಎಲ್ಲರನ್ನೂ ಸೋದರರೆಂದು ಭಾವಿಸುವುದು

II. ಸರಿಯಾದ ಉತ್ತರವನ್ನು ಆಯ್ದು ಖಾಲಿಜಾಗ ಭರ್ತಿಮಾಡಿ:– **(5 × 1 = 5)**

6) ವಾರ್ಧಿ ಪದದ ಅರ್ಥ ..............

7) 'ನಿತ್ಯ' ಪದದ ತದ್ಭವ ರೂಪ ............

8) ದ್ವಿರುಕ್ತಿ ಪದಕ್ಕೆ ಉದಾಹರಣೆ ..............

9) ಇಹ ಪದದ ವಿರುದ್ಧಾರ್ಥಕ.........

10) ವಿದ್ಯುಲ್ಲತೆ ಪದವನ್ನು ಬಿಡಿಸಿದರೆ ..........

(ನಿಚ್ಚ, ಆಡಿದನಾಡಿದ, ಸಮುದ್ರ, ವಿದ್ಯುತ್ + ಲತೆ, ಊರು, ಪರ)

III. ಸರಿಯಾದ ಉತ್ತರಗಳನ್ನು ಆಯ್ದು ಹೊಂದಿಸಿ ಬರೆಯಿರಿ:– **(5 × 1 = 5)**

| | | |
|---|---|---|
| 11) ದಿನಮಣಿ | – | ಸಿರಿ |
| 12) ಗಾವಿಲ | – | ಗ್ರಾಮೀಣ |
| 13) ಶ್ರೀ | – | ಮೇಕೆ, ಆಟವಾಡು |
| 14) ನೀತಿ | – | ದಡ್ಡ |
| 15) ಆಡು | – | ಸೂರ್ಯ, ನೇಸರ |
| | – | ಅನೀತಿ |

IV. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ:– **(5 × 1 = 5)**

16) ಅರ್ಜುನನನ್ನು ಪರೀಕ್ಷಿಸಲು ಶಿವನು ಯಾವ ವೇಷದಲ್ಲಿ ಬಂದನು?

17) ಶಿವನು ಗುಂಡಯ್ಯನಿಗೆ ನೀಡಿದ ಪದವಿ ಯಾವುದು?

18) ಪರಮ ತತ್ವಜ್ಞಾನ ಯಾರಿಗೆ ಇಲ್ಲ?

19) ನಾಲಿಗೆ ಇಲ್ಲದಲೆ ಉಲಿವುದು ಯಾವುದು?

20) ಹಲವು ಮನೆಯ ತಿರುಗುವ ಹೆಣ್ಣು ಯಾರು?

## ಆ–ವಿಭಾಗ

V. ಕೆಳಗಿನ **ನಾಲ್ಕು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(4 × 2 = 8)**

21) ನೀಲಾಂಜನೆಯ ನೃತ್ಯವನ್ನು ನೋಡುತ್ತಿದ್ದ ರಾಜರುಗಳ ಮನಃಸ್ಥಿತಿ ಹೇಗಿತ್ತು ?

22) ಅರ್ಜುನನು ಯಾರಿಂದ ಯಾವ ಅಸ್ತ್ರವನ್ನು ಪಡೆದನು?

23) ಗುಂಡಯ್ಯನನ್ನು ಶಿವನು ಹೇಗೆ ಕೊಂಡಾಡಿದನು?

24) ಮಾಯೆಯು ಕನಸಿನ ಬಗ್ಗೆ ಮಾತನಾಡಿದಾಗ ಅಲ್ಲಮ ಕೊಡುವ ಉತ್ತರವೇನು?

25) ಸರ್ವಜ್ಞನ ತ್ರಿಪದಿಯಲ್ಲಿ ಬರುವ ವನಿತೆಯರನ್ನು ಹೆಸರಿಸಿ.

26) ಬಡತನದಲ್ಲಿಯೂ ಮಗಳಿಗೆ ಏನನ್ನು ಕೊಡಬೇಕೆಂದು ಹೊನ್ನಮ್ಮ ಹೇಳಿದ್ದಾಳೆ?

VI. ಕೆಳಗಿನ ಸಾಲುಗಳಲ್ಲಿ **ನಾಲ್ಕರ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(4 × 3 = 12)**

27) 'ಸುರಕಾಮಿನಿ ರಂಗದೊಳ್ ಅದೃಶ್ಯಮಪ್ಪುದು'

28) 'ಸೌಜನ್ಯ ವಿದೂರನಾದೆನ್'

29) 'ಆಡಿದನಾಡಿದನಾಹಾ ಶಂಕರ'

30) 'ಕಾಮವೆತ್ತಲು ಪರಮ ತತ್ವದ ಸೀಮೆಯೆತ್ತಲು'

31) 'ಗುಣ ದಯೆ ಇಲ್ಲದುದೆ ಹಗೆ'

32) 'ಕೇರಿಯೆಲ್ಲವು ಬಳಗ'.

VII. ಕೆಳಗಿನ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 4 = 8)**

33) ಶಿವನ ಎದುರು ಸೋತ ಅರ್ಜುನ ತನ್ನ ಸೋಲಿನ ಆತ್ಮಾವಲೋಕನವನ್ನು ಹೇಗೆ ಮಾಡಿಕೊಂಡನು?

34) ಕಾಳುಮತಿಗಳಿಗೆನಿತು.... ಪದ್ಯದಲ್ಲಿ ಅಲ್ಲಮ ವಿಮಳೆಗೆ ನೀಡುವ ಉತ್ತರದ ಸ್ವಾರಸ್ಯವನ್ನು ಸಂಗ್ರಹಿಸಿ ಬರೆಯಿರಿ.

35) ಸರ್ವಜ್ಞನ ತ್ರಿಪದಿಗಳಲ್ಲಿ ದೇವರು ಎಲ್ಲಿದ್ದಾನೆ ಎಂಬ ವಿಚಾರ ಹೇಗೆ ಚಿತ್ರಿತಗೊಂಡಿದೆ?

36) ನೇಮದೊಳು ನೆಲೆಸುವುದು ಕಾವ್ಯಭಾಗದ ಮಹತ್ವವನ್ನು ಕುರಿತು ಬರೆಯಿರಿ.

VIII. ಕೆಳಗಿನ **ಒಂದು** ಪದ್ಯದ ಭಾವಾರ್ಥ ಬರೆಯಿರಿ : **(1 × 4 = 4)**

37) ಅಂಬರಭೂಷಣಮಾಲಾ
ಡಂಬರದ ಬೆಡಂಗನಮರನರ್ತಕಿ ಗಡಮೇ
ನೆಂಬುದೊ ಧರಣೀಂದ್ರಂಗಮ
ಳುಂಬಂ ಪೊಗಳಲ್ಕೆ ರೂಪು ನೀಳಾಂಜನೆಯಾ

38) ಗುರುವಿಗೆ ದೈವಕ್ಕೆ ಧರ್ಮಕ್ಕೆ ದಾನಕ್ಕೆ
ಪರಪುರುಷಾರ್ಥಕೀಯದನ
ಪಿರಿದರ್ಥಂ ವ್ಯರ್ಥಮಲ್ಲವೆ ರಂಗೇಶ
ಪರಮೋದಾರತೆ ಪೂಜ್ಯಮಿಳೆಗೆ

## ಇ–ವಿಭಾಗ

IX. ಕೆಳಗಿನ **ಒಂದು** ಪ್ರಶ್ನೆಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(1 × 2 = 2)**

39) ಬೆಕ್ಕಿನ ಸ್ವರವನ್ನು ಆಲಿಸಿದವರು ಯಾರು?

40) ತಂದೆ ತಾಯಿ ನಾಗಿಯನ್ನು ಹೇಗೆ ಹುಡುಕಿದರು?

X. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

41) ನಾಗಿಯ ಪಾತ್ರದ ಮೂಲಕ ಯೌವ್ವನದ ಮನಃಸ್ಥಿತಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆ?

42) ನಾಗಿ ಪದ್ಯದಲ್ಲಿ ಬಂದಿರುವ ಬೆಕ್ಕಿನ ಸಾಂಕೇತಿಕ ರೂಪವನ್ನು ಚರ್ಚಿಸಿರಿ.

## ಈ–ವಿಭಾಗ

XI. ಕೆಳಗಿನ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ : **(2 × 2 = 4)**

43) ಮೂಡಣ ಮತ್ತು ಪಡುವಣದಲ್ಲಿ ಯಾರ್‍ಯಾರಿದ್ದಾರೆ?

44) ರೈತ ಶಿವನ ಗುಡಿಯಿಂದ ಏನೇನು ತಂದಿದ್ದಾನೆ?

45) ಶಿವನು ಚಂದ್ರ ಮತ್ತು ಗಂಗೆಯರನ್ನು ಏನು ಮಾಡಿದೆನೆಂದು ಹೇಳುತ್ತಾನೆ?

XII. ಕೆಳಗಿನ **ಎರಡು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2 × 3 = 6)**

46) 'ಒಂದು ದಿನವಾದರೂ ವಿಶ್ರಾಂತಿ ಇರಲಿ'.

47) 'ಬೀದಿಗುಡಿಸುವ ಬಡವನೆದೆಯಲ್ಲಿ ನಾನಿರುವೆ'.

48) 'ಊರ ತೋಟಿಯು ನೀನು; ಜಗದ ತೋಟಿಯು ನಾನು'.

XIII. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 4 = 4)**

49) ಗುಡಿಗಳು ಪಾಪಿಗಳ ಗೂಡುಗಳು ಎಂದು ತಿರುಕ ಏಕೆ ಹೇಳುತ್ತಾನೆ? ವಿವರಿಸಿ.

50) ಕಾಯಕದ ಮೂಲಕವೇ ಶಿವನನ್ನು ಕಾಣಬೇಕು ಎಂಬುದನ್ನು ಜಲಗಾರ ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿ?

## ಉ–ವಿಭಾಗ

XIV. ಕೆಳಗಿನ **ಒಂದು** ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ ಛಂದಸ್ಸನ್ನು ಹೆಸರಿಸಿ : **(1 × 4 = 4)**

51) ಎನಿತೊಡಲಂ ತಾಳ್ದಿದುದಿ
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನಳನಿಂ
ದೆನಿತೆನಿತಂ ಮರುಗಿದುದಿ
ಲ್ಲನಂತ ಸಂಸಾರಗಹನದೊಳ್ ಜೀವಂಗಳ್

52) ತಿಲದ ತೈಲದ ತೆರದೆ ಕಾಷ್ಟದಗ್ನಿಯ ತೆರದೆ
ನೆಲದ ಮರೆಯೊಳಗೆ ತೊಳಗುವ ನಿಧಾನದ ತೆರದೆ

XV. ಕೆಳಗಿನವುಗಳಲ್ಲಿ **ಒಂದರ** ಅಲಂಕಾರ ಹೆಸರಿಸಿ, ಸಮನ್ವಯಗೊಳಿಸಿ : **(1 × 4 = 4)**

53) 'ಬಿರುಗಾಳಿ ಪೊಡೆಯಲ್ಕೆ ಫಲಿತ ಕದಳಿ ಕಂಪಿಸಿ ಮುರಿದು
ಇಳೆಗೆ ಒರಗುವಂತೆ ಬಿದ್ದಳಂಗನೆ'

54) 'ಯುದ್ಧವನ್ನು ನೋಡಲು ದಿನಪನುದಿಸಿ ಬಂದ'

---